ರಾಜ್ಯ ಸರ್ಕಾರ ಪ್ರವಾಸೋದ್ಯಮ ಇಲಾಖೆಗೆ ಒದಗಿಸಿರುವ ಹಣ ಕುರಿತು

1668 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಪ್ರವಾಸೋದ್ಯಮಕ್ಕೆ ಯಾವ ಯಾವ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಂಡಿದೆ?

ಆ) ಕಳೆದ ಮೂರು ವರ್ಷಗಳಲ್ಲಿ ಈ ಕ್ಷೇತ್ರಗಳಲ್ಲಿ ಎಷ್ಟೆಷ್ಟು ಹಣ ವಿನಿಯೋಗಿಸಿದೆ?

ಇ) ದಕ್ಷಿಣ ಕನ್ನಡ ಜಿಲ್ಲೆಯ ಎಷ್ಟು ಕಡೆಗಳಲ್ಲಿ ಪ್ರವಾಸೋದ್ಯಮಕ್ಕೆ ಕಾರ್ಯಗಳನ್ನು ಹಾಕಿಕೊಳ್ಳಲಾಗಿದೆ?

ಈ) ಉಳ್ಳಾಳ ವಿಧಾನ ಸಭೆ ಕ್ಷೇತ್ರದ ಸೋಮೇಶ್ವರ ಉಳ್ಳಾಳ ಪ್ರವಾಸೋದ್ಯಮ ಇಲಾಖೆಯು ಅಭಿವೃದ್ಧಿಪಡಿಸಲು ಏನು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಪ್ರವಾಸೋದ್ಯಮ ಅಭಿವೃದ್ಧಿ ದೃಷ್ಟಿಯಿಂದ ರಾಜ್ಯವನ್ನು 5 ಪ್ರವಾಸಿ ವೃತ್ತಗಳನ್ನಾಗಿ ಗುರುತಿಸಲಾಗಿದೆ. ಎಲ್ಲಾ ಜಿಲ್ಲೆಗಳ ಪ್ರಮುಖ ಪ್ರವಾಸಿ ತಾಣಗಳನ್ನು ಆಯ್ಕೆ ಮಾಡಲಾಗಿದೆ.

1) ಉತ್ತರ ವೃತ್ತ :

1. ಬೀದರ್ ಜಿಲ್ಲೆ
2. ಧಾರವಾಡ ಜಿಲ್ಲೆ
3. ಗುಲ್ಬರ್ಗಾ ಜಿಲ್ಲೆ
4. ಬಿಜಾಪುರ ಜಿಲ್ಲೆ
5. ಬಳ್ಳಾರಿ ಜಿಲ್ಲೆ
6. ಬೆಳಗಾವಿ ಜಿಲ್ಲೆ
7. ಚಿತ್ರದುರ್ಗ ಜಿಲ್ಲೆ
8. ರಾಯಚೂರು ಜಿಲ್ಲೆ

2) ದಕ್ಷಿಣ ವೃತ್ತ :

1. ಬೆಂಗಳೂರು ಜಿಲ್ಲೆ
2. ಬೆಂಗಳೂರು ಗ್ರಾಮಾಂತರ ಜಿಲ್ಲೆ
3. ಮಂಡ್ಯ ಜಿಲ್ಲೆ

4. ಹಾಸನ ಜಿಲ್ಲೆ

5. ಮೈಸೂರು ಜಿಲ್ಲೆ

6. ಚಿಕ್ಕಮಗಳೂರು ಜಿಲ್ಲೆ

7. ಶಿವಮೊಗ್ಗ ಜಿಲ್ಲೆ

8. ಕೊಡಗು ಜಿಲ್ಲೆ

9. ಕೋಲಾರ ಜಿಲ್ಲೆ

10. ತುಮಕೂರು ಜಿಲ್ಲೆ.

3) ಕರಾವಳಿ ವೃತ್ತ :

1. ಉತ್ತರ ಕನ್ನಡ ಜಿಲ್ಲೆ

2. ದಕ್ಷಿಣ ಕನ್ನಡ ಜಿಲ್ಲೆ

4) ವನ್ಯಧಾಮ ವೃತ್ತ :

1. ಭೀಮೇಶ್ವರಿ - ರಂಗನತಿಟ್ಟು

2. ಬಿಳಿಗಿರಿ ರಂಗನ ಬೆಟ್ಟ - ಬಂಡಿಪುರ-ಖಾರಾಪುರ ನಾಗರಹೊಳೆ

5) ಗಿರಿಧಾಮ ವೃತ್ತ :

1. ಮಡಿಕೇರಿ - ಕೆಮ್ಮಣ್ಣುಗುಂಡಿ - ಕುದುರೆಮುಖ

2. ಬಿಳಿಗಿರಿರಂಗನ ಬೆಟ್ಟ - ಸಂಡೂರು - ನಂದಿಬೆಟ್ಟ.

ಆ) 1) 1 994-95ರಲ್ಲಿ - ರೂ. 587.00 ಲಕ್ಷ

2) 1995-96ರಲ್ಲಿ - ರೂ.771.00 ಲಕ್ಷ

3) 1996-97ರಲ್ಲಿ - ರೂ.1158.00 ಲಕ್ಷ

ಇ) 1) ರಾಜ್ಯ ಸರ್ಕಾರವು ದಿನಾಂಕ 1-6-97ರಿಂದ ಪ್ರವಾಸೋದ್ಯಮ ನೀತಿಯನ್ನು ಜಾರಿಗೆ ತಂದಿರುತ್ತದೆ. ಈ ನೀತಿಯಲ್ಲಿ ಪ್ರವಾಸಿ ಸ್ಥಳಗಳಲ್ಲಿ ಪ್ರವಾಸಿ ಮೂಲಭೂತ ಸೌಲಭ್ಯಗಳನ್ನು ನಿರ್ಮಿಸಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ರಿಯಾಯ್ತಿ ಮತ್ತು ಉತ್ತೇಜನಗಳನ್ನು ನೀಡುವ ಮೂಲಕ ಪ್ರೋತ್ಸಾಹಿಸಲಾಗುತ್ತದೆ.

2) ಅಲ್ಲದೆ, ಇಲಾಖೆಯು ರಾಜ್ಯ ಹಾಗೂ ಕೇಂದ್ರ ನೆರವು ಯೋಜನೆಯಡಿಯಲ್ಲಿ ಈ ಕೆಳಕಂಡ ಯೋಜನೆಗಳನ್ನು ಜಿಲ್ಲಾ ಪಂಚಾಯಿತಿ ಮತ್ತು ಜಿಲ್ಲಾ ಆಡಳಿತ ಕೈಗೆತ್ತಿಕೊಂಡಿದೆ.

(ಲಕ್ಷ ರೂ.ಗಳಲ್ಲಿ)

1.	ಉಳ್ಳಾಳ ಸಮುದ್ರ ತೀರದ ಅಭಿವೃದ್ಧಿ	4.00
2.	ಉಳ್ಳಾಳ ಸಮುದ್ರ ತೀರದ ಕೂಡುರಸ್ತೆ ಅಭಿವೃದ್ಧಿ	4.00
3.	ಸೈಯದ್ ಮದನಿಧರ್ಗ ಉಳ್ಳಾಳ ಕೂಡುರಸ್ತೆ ಅಭಿವೃದ್ಧಿ	8.00
4.	ಮರವಂತೆ ಕಡಲುತೀರ ಅಭಿವೃದ್ಧಿ	5.00
5.	ಸೂರತ್ಕಲ್ ಕಡಲುತೀರ ಅಭಿವೃದ್ಧಿ	5.00
6.	ಸೂರತ್ಕಲ್ ಕಡಲುತೀರದಲ್ಲಿ ಗೋಡೆ ನಿರ್ಮಾಣ	4.00
7.	ಸೂರತ್ಕಲ್ ಕಡಲುತೀರದ ಕೂಡುರಸ್ತೆ ಅಭಿವೃದ್ಧ	5.00
8.	ಮಲ್ಪೆ ಕಡಲು ತೀರ ಅಭಿವೃದ್ಧಿ	8.00
9.	ಮಲ್ಪೆ ಕೂಡುರಸ್ತೆ ಅಭಿವೃದ್ಧಿ	5.00
10.	ಶಿರೂರು ಬೀಚಿನ ಕೂಡುರಸ್ತೆ ಅಭಿವೃದ್ಧಿ	5.00
11.	ಪಿಲಿಕುಲ ನಿಸರ್ಗಧಾಮದಲ್ಲಿ ಪ್ರವಾಸಿಗರಿಗೆ ಟಾಯ್ ಟ್ರೈನ್ ಸೌಲಭ್ಯ	5.00
12.	ವೇಣೂರಿನಲ್ಲಿ ಕೂಡುರಸ್ತೆ ಅಭಿವೃದ್ಧಿ	2.50
13.	ಪ್ರವಾಸಿ ಕಛೇರಿ ನಿರ್ಮಾಣ, ಮಂಗಳೂರು	20.00
14.	ಉಡುಪಿ, ಧರ್ಮಸ್ಥಳ ಮತ್ತು ಉಳ್ಳಾಲಗಳಲ್ಲಿ ಸುಲಭ ಶೌಚಾಲಯ ನಿರ್ಮಾಣ	17.40
15.	ಯಾತ್ರಿನಿವಾಸ ನಿರ್ಮಾಣ, ಉಡುಪಿ	25.00
16.	ಯಾತ್ರಿನಿವಾಸ ನಿರ್ಮಾಣ, ಮರವಂತೆ	25.00
17.	ಕೂಡುರಸ್ತೆ ಅಭಿವೃದ್ಧಿ ವಾಮಂಜೂರಿನಿಂದ ಪಿಲಿಕುಲಕ್ಕೆ	5.00
18.	ಕೂಡುರಸ್ತೆ ಅಭಿವೃದ್ಧಿ ಮುಡ್‌ಶೆಡ್, ಪಿಲಿಕುಲಕ್ಕೆ	5.00

ಈ) ಪ್ರಸ್ತುತ ಸಾಲಿನಲ್ಲಿ ದೀಪದ ಹಾಗೂ ಆಸನ ವ್ಯವಸ್ಥೆ ಒದಗಿಸಲು ಯೋಜಿಸಲಾಗಿದೆ.

ಕರಾವಳಿ ಪ್ರದೇಶಗಳಲ್ಲಿ ಮೀನುಗಾರಿಕೆಯಲ್ಲಿ ನಿರತರಾಗಿರುವ ಹಾಗೂ ಯಾಂತ್ರಿಕ ದೋಣಿಗಳು ಹಾಳಾದಾಗ ಆಗುವ ಸಮಸ್ಯೆ

1670 - ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?